ದಿಃ 03.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎಸ್.ಬಿ.ಎ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಈಗಾಗಲೇ ಪ್ರಾಸಾ.1 ರವರ ಮೂಲಕ ಗುರುತಿಸಲಾದ ನಿ.ಪಿ.1 ರಿಂದ 4 ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.
3. ದಾವ ಸ್ವತ್ತಿಗೆ ಸಂಬಂಧಿಸಿದ grant certificate ಅನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.5 ಎಂದು, ದಿಃ 30.03.1999 ರಂದು ಎ.ಇ. ಉಮರ್ ಖಾನ್ ರವರು ನನಗೆ ಬರೆದುಕೊಟ್ಟ ದಾವ ಸ್ವತ್ತಿನ ಕ್ರಯ ಪತ್ರದ ಮೂಲ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.6 ಎಂದು, ದಾವ ಸ್ವತ್ತಿಗೆ ಸಂಬಂಧಿಸಿದ ಎರಡು ಇ.ಸಿ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ.7 ಮತ್ತು 8 ಎಂದು, ಹಿಡುವಳಿ ದೃಢೀಕರಣ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.9 ಎಂದು, ಮುಟೇಷನ್ ರಿಜೀಸ್ಟರ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.10 ಎಂದು, record of rights ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.11 ಎಂದು, ಭೂ ಕಂದಾಯ ತೀರುವಳಿ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.12 ಎಂದು, ಕಂದಾಯ ಪಾವತಿ ರಸೀದಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.13 ಎಂದು ಗುರುತಿಸಲಾಯಿತು.
4. ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲು ಶ್ರೀ ಎಸ್.ಡಿ., ವಕೀಲರಿಂದ ಪ್ರತಿವಾದಿ ಪರವಾಗಿ

5. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿಃ 12.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಸ್.ಡಿ., ವಕೀಲರಿಂದ ಪ್ರತಿವಾದಿ ಪರವಾಗಿ

6. ದಾವ ಜಮೀನು ಪಕ್ಕಾ ಪೋಡಿ ಆಗಿಲ್ಲ ಎಂದರೆ ಸರಿ. ದಾವ ಸ್ವತ್ತನ್ನು ಪಕ್ಕಾ ಪೋಡಿ ಮಾಡಬೇಕು ಎಂದು ಅರ್ಜಿ ಸಲ್ಲಿಸಿಲ್ಲ. ಸರ್ವೆ ನಂಬರ್ 271 ರಲ್ಲಿ ನನಗೆ ಇನ್ನು ಬೇರೆ ಆಸ್ತಿ ಇರುವುದರಿಂದ ನಾನು ದಾವ ಸ್ವತ್ತನ್ನು ಪಕ್ಕಾ ಪೋಡಿ ಮಾಡಿಕೊಡಲು ಅರ್ಜಿ ಸಲ್ಲಿಸಿಲ್ಲ. ದಾವ ಸ್ವತ್ತನ್ನು ಹೊರತು ಪಡಿಸಿ ಸರ್ವೆ ನಂಬರ್ 271 ರಲ್ಲಿ ನನಗೆ ಇನ್ನು 3 ಎಕರೆ ಮತ್ತು ಟಿ.ಟಿ (Temporary Tax) ಕಟ್ಟಿದ 2 ಎಕರೆ ಜಮೀನು ಇರುತ್ತದೆ. ದಾವ ಸ್ವತ್ತಿನ ಉತ್ತರಕ್ಕೆ ನಾನು ಟಿ.ಟಿ. ಕಟ್ಟಿದ 2 ಎಕರೆ ಜಮೀನು ಬರುತ್ತದೆ . ದಾವ ಸ್ವತ್ತಿನ ಉತ್ತರ ದಿಕ್ಕಿಗೆ ನನಗೆ ಇರುವ 3 ಎಕರೆ ಜಮೀನು ಬರುತ್ತದೆ. Wilferd Pinto ಎನ್ನುವವರು ನನ್ನ ತಂದೆಯ ಅಕ್ಕನ ಮಗ. Wilferd Pinto ರವರಿಗೆ ಸರ್ವೆ ನಂಬರ್ 275 ರಲ್ಲಿ ಜಮೀನು ಇರುತ್ತದೆ. ದಾವ ಸ್ವತ್ತಿನ ಉತ್ತರ ದಿಕ್ಕಿಗೆ Wilferd Pinto ರವರಿಗೆ ಸೇರಿದ ಸರ್ವೆ ನಂಬರ್ 275 ರ ಜಮೀನು ಬರುತ್ತದೆ. ದಾವ ಸ್ವತ್ತಿನ ಉತ್ತರ ದಿಕ್ಕಿಗೆ Wilferd Pinto ರವರಿಗೆ ಸೇರಿದ ಸರ್ವೆ ನಂಬರ್ 275 ರ ಜಮೀನು ಬರುತ್ತದೆ ಎಂದು ವಾದ ಪತ್ರದಲ್ಲಿ ಹೇಳಿದ್ದೇನೆ. ದಿಃ 15.03.2023 ರಂದು ನನಗೆ ನ್ಯಾಯಾಲಯದಿಂದ ಬಂಧನ ವಾರೆಂಟ್ ಇದ್ದ ಕಾರಣ ನಾನು ಊರಿನಲ್ಲಿ ಇರಲಿಲ್ಲ ಎಂದರೆ ಸುಳ್ಳು. ದಾವ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಪ್ರವೀಣ್ ಶೆಟ್ಟಿ ರವರ ಜಮೀನು ಬರುತ್ತದೆ, ದಕ್ಷಿಣ ದಿಕ್ಕಿಗೆ ಖಾದರ್ ರವರ ಜಮೀನು ಬರುತ್ತದೆ. ಪ್ರವೀಣ್ ಮತ್ತು ಖಾದರ್ ರವರು ದಿಃ 15.03.2023 ರಂದು ಅತಿಕ್ರಮಣ ಮಾಡಿದ್ದಾರೆ ಎಂದು ಕರೆ ಮಾಡಿ ನನಗೆ ತಿಳಿಸಿದ್ದರು. ನಾನು ಆ ಸಮಯದಲ್ಲಿ ಮಂಗಳೂರಿನಲ್ಲಿ ಇದ್ದೆ. ದಿಃ 15.03.2023 ರಕ್ಕಿಂತ 2 ವರ್ಷ ಮೊದಲಿನಿಂದಲು ನಾನು ಮಂಗಳೂರಿನಲ್ಲಿ ವಾಸವಿದ್ದೇನೆ.

7. ಪ್ರತಿವಾದಿಗಳು ದಾವ ಸ್ವತ್ತಿನ ಪಶ್ಚಿಮ ದಿಕ್ಕಿನಿಂದ ಅತಿಕ್ರಮಣ ಮಾಡಲು ಬಂದಿದ್ದರು. ದಿಃ 15.03.2023 ರಂದು ವಿಚಾರ ತಿಳಿದ ಬಳಿಕ ಪೊಲೀಸರಿಗೆ ದೂರನ್ನು ದಿಃ 18 ಅಥವಾ ದಿಃ 19 ರಂದು ನೀಡಿದ್ದೇನೆ. ದೂರನ್ನು ನೀಡಿದ ಬಳಿಕ ಪೊಲೀಸರು ನನ್ನನ್ನು ಕರೆಸಿಲ್ಲ. ಪೊಲೀಸರಿಗೆ ಸಲ್ಲಿಸಿದ ದೂರನ್ನು

ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ದೂರನ್ನು ನೀಡಿದ ಬಳಿಕ ಪೊಲೀಸರಿಗೆ ನಾನು ದೂರಿನ ಬಗ್ಗೆ ವಿಚಾರಿಸಿದ್ದೆ, ಪೊಲೀಸರು ನನಗೆ ಮಾಹಿತಿ ನೀಡುತ್ತೇವೆ ಎಂದು ನೀಡಲಿಲ್ಲ.

8. ಸಾಕ್ಷಿಗೆ ಸರ್ವೆ ನಂಬರ್ 271 ರ ಆರ್.ಟಿ.ಸಿ ಯನ್ನು ತೋರಿಸಿ ಕೇಳಲಾಗಿ ಸಾಕ್ಷಿ ಆರ್.ಟಿ.ಸಿ ಯನ್ನು ನೋಡಿ ಆ ಆರ್.ಟಿ.ಸಿ ನನ್ನ ಜಮೀನಿಗೆ ಸಂಬಂಧಿಸಿದ್ದು ಎಂದು ಗುರುತಿಸಿದ್ದರಿಂದ ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ನಿ.ಡಿ.1 ರ ಕಾಲಂ ನಂಬರ್ 10 ರಲ್ಲಿ ವಿಸ್ತೀರ್ಣ ಬದಲಾವಣೆಯಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿ.ಡಿ.1 ರ ಕಾಲಂ ನಂಬರ್ 11 ರಲ್ಲಿ ಉಡುಪಿ ನ್ಯಾಯಾಲಯದಿಂದ attachment ಆಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ನಾನು ಹಾಜರು ಮಾಡಿರುವ ನಿ.ಪಿ.2 ಆರ್.ಟಿ.ಸಿ ಯಲ್ಲಿ ನಿ.ಡಿ.1 ರಲ್ಲಿ ನಮೂದಾಗಿರುವ ವಿವರಗಳು ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಆ ದಿನಾಂಕದಂದು ಆ ವಿವರಗಳು ನಮೂದಿರಲಿಲ್ಲ ಎಂದು ನುಡಿಯುತ್ತಾರೆ.

9. ನನ್ನ ಮುಖ್ಯ ವಿಚಾರಣೆಯಲ್ಲಿ ಇರುವ ಸಹಿ ನನ್ನದೇ ಎಂದರೆ ಸರಿ. ಸಾಕ್ಷಿಗೆ ಮುಖ್ಯ ವಿಚಾರಣೆಯಲ್ಲಿ ಇರುವ ಸಹಿ ಮತ್ತು ಜೆರಾಕ್ಸ್ ಕ್ರಯದ ಕರಾರು ಪತ್ರವನ್ನು ತೋರಿಸಿ ಅದರಲ್ಲಿ ಇರುವ ಸಹಿ ಮತ್ತು ಮುಖ್ಯ ವಿಚಾರಣೆಯಲ್ಲಿ ಇರುವ ಸಹಿ ಒಂದೇ ಎಂದು ಕೇಳಲಾಗಿ ಸಾಕ್ಷಿ ಜೆರಾಕ್ಸ್ ಕ್ರಯದ ಕರಾರು ಪತ್ರದಲ್ಲಿ ಇರುವ ಸಹಿ ತನ್ನದಲ್ಲ ಎಂದು ನುಡಿಯುತ್ತಾರೆ. ಕೂವೆ ಗ್ರಾಮದ ಮಂಜೇಗೌಡರ ಮಗ ಎಸ್.ಎಂ. ಉಮೇಶ್ ಗೌಡ ನನಗೆ ಗೊತ್ತು. ದಿಃ 30.11.2015 ರಂದು ನಾನು ಮಂಜೇಗೌಡರ ಮಗ ಎಸ್.ಎಂ. ಉಮೇಶ್ ಗೌಡರವರಿಗೆ ದಾವ ಸ್ವತ್ತನ್ನು ಸ್ವಾಧೀನ ಸಹಿತ ಮಾರಾಟ ಮಾಡಿದ್ದೇನೆ ಎಂದರೆ ಸುಳ್ಳು. ದಾವ ಸ್ವತ್ತನ್ನು ಮಾರಾಟ ಮಾಡಿ ಅದೇ ದಿನ ಉಮೇಶ್ ಗೌಡರ ಜೊತೆ ನಾನು ಕ್ರಯದ ಕರಾರನ್ನು ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ಸದರಿ ಕ್ರಯದ ಕರಾರಿಗೆ ಸ್ಟ್ಯಾಂಪ್ ಶುಲ್ಕವನ್ನು ದಿಃ 05.05.2016 ರಂದು ಉಮೇಶ್ ಗೌಡ ರವರು ಜಿಲ್ಲಾ ಉಪನೊಂದಣಾ ಅಧಿಕಾರಿಗಳ ಕಚೇರಿಯಲ್ಲಿ ಪಾವತಿ ಮಾಡಿದ್ದಾರೆ ಎಂದರೆ ಸುಳ್ಳು. ಚಂದ್ರೇಗೌಡ ಮತ್ತು ಸುಬ್ಬರಾಯಗೌಡ ಎಂಬುವವರು ಯಾರು ಎಂದು ನನಗೆ ಗೊತ್ತಿಲ್ಲ.

10. ದಿಃ 30.11.2015 ರಂದು ದಾವ ಸ್ವತ್ತನ್ನು ನಾನು ಎಸ್.ಎಂ. ಉಮೇಶ್ ಗೌಡ ರವರಿಗೆ ಮಾರಾಟ ಮಾಡಿರುವುದರಿಂದ ದಾವ ಸ್ವತ್ತಿನ ಸ್ವಾಧೀನ ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ. ಆ ಕ್ರಯದ ಕರಾರಿನ ಆಧಾರದ ಮೇಲೆ ಎಸ್.ಎಂ. ಉಮೇಶ್ ಗೌಡ ರವರು ಸಾಧೀಕ್ ಎಂಬುವವರಿಗೆ ಕ್ರಯದ ಕರಾರನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಪ್ರತಿವಾದಿಯರ ಮೇಲೆ ಸಲ್ಲಿಸಿ ಸ್ವಾಧೀನ ಪಡೆದುಕೊಂಡು ಎಸ್.ಎಂ. ಉಮೇಶ್ ಗೌಡ ರವರನ್ನು ದಾವ ಸ್ವತ್ತಿನಿಂದ ಹೊರಗೆ ಹಾಕುವ ಹುನ್ನಾರವನ್ನು ನಡೆಸಿದ್ದೇನೆ ಎಂದರೆ ಸುಳ್ಳು.

11. O.S.28/2017 ರಂತೆ ದಾವ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಲಿನಾ ಮಿಸ್ಕಿತ್ ಮತ್ತು ಆಕೆಯ ಮಕ್ಕಳ ಮೇಲೆ ಚಿಕ್ಕಮಗಳೂರು ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಆ ದಾವೆಯನ್ನು ನಾನು ಅವರುಗಳ ಮೇಲೆ ಶಾಶ್ವತ ನಿರ್ಭಂದ ಕಾಜ್ಞೆ ಕೋರಿ ಸಲ್ಲಿಸಿದ್ದೆ ಎಂದರೆ ಸಾಕ್ಷಿ ಆ ದಾವೆಯನ್ನು ನಾನು ಸರ್ಕಾರಿ ಜಾಗವನ್ನು ಸಹ ಸೇರಿ ಮತ್ತು 3 ಗುಂಟೆ ಜಾಗವನ್ನು ಸೇರಿಸಿ ದಾಖಲಿಸಿದ್ದೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನ ಸ್ವಾಧೀನದಲ್ಲಿ ನಾನು ಇಲ್ಲ ಎಂದು ಆ ದಾವೆಯನ್ನು ನ್ಯಾಯಾಲಯ ವಜಾ ಮಾಡಿತ್ತು ಎಂದರೆ ಸುಳ್ಳು. ದಾವ ಸ್ವತ್ತಿನ ಪೂರ್ವ ಪಶ್ಚಿಮಕ್ಕೆ 3 ಗುಂಟೆ ಜಾಗ ಬರುತ್ತದೆ. ದಾವ ಸ್ವತ್ತಿನ ಪೂರ್ವ ಪಶ್ಚಿಮ ದಿಕ್ಕಿಗೆ 3 ಗುಂಟೆ ಜಾಗ ಬರುತ್ತದೆ ಎಂದು ನಾನು ಈ ದಾವೆಯ ಶೆಡ್ಯೂಲ್ ನಲ್ಲಿ ಕಾಣಿಸಿಲ್ಲ. ಬಾಳೂರು ಗ್ರಾಮದ ಕೂವೆ ಗ್ರಾಮದಲ್ಲಿ ನಾನು ವಾಸವಿಲ್ಲ ಎಂದರೆ ಸುಳ್ಳು. ದಿಃ 15.03.2023 ರಂದು ಪ್ರತಿವಾದಿಗಳು ದಾವ ಸ್ವತ್ತಿಗೆ ಅತಿಕ್ರಮ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿಃ 07.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಡಿ., ವಕೀಲರಿಂದ ಪ್ರತಿವಾದಿ ಪರವಾಗಿ

12. ದಿಃ 30.11.2017 ರಂಡು ಮೂಡಿಗೆರೆಯ ಸಿವಿಲ್ ಮತ್ತು ಜೆ.ಎಂ.ಎಫ್ ಸಿ ನ್ಯಾಯಾಲಯದಲ್ಲಿ P & SC ಪ್ರಕರಣವನ್ನು ನಾನು ದಾಖಲಿಸಿದ್ದೆ ಎಂದರೆ ಸಾಕ್ಷಿ Willfred pinto ರವರ 3 ಎಕರೆ ಆಸ್ತಿಗೆ ಸಂಬಂಧಿಸಿದಂತೆ ಆ ಅರ್ಜಿಯನ್ನು ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. P & SC ಪ್ರಕರಣದಲ್ಲಿ ಕಾಣಿಸಿರುವ ಚಕ್ಕುಬಂದಿಯನ್ನೇ ಈ ಕೇಸಿನಲ್ಲಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ. P & SC ಪ್ರಕರಣದಲ್ಲಿ Willfred pinto ರವರಿಗೆ ಯಾರು ವಾರಸುದಾರರು ಇಲ್ಲ, ನಾನೇ ವಾರಸುದಾರ ಎಂದು ಆ ಪ್ರಕರಣವನ್ನು ದಾಖಲಿಸಿದ್ದೆ ಎಂದರೆ ಸಾಕ್ಷಿ ನಾನೇ ವಾರಸುದಾರನಾಗಿದ್ದೆ ಎಂದು ನುಡಿಯುತ್ತಾರೆ. 2017 ರಲ್ಲಿ ಆ ಸ್ವತ್ತು ಪ್ರತಿವಾದಿಗಳ ಸ್ವಾಧೀನದಲ್ಲಿ ಇತ್ತು ಎಂದರೆ ಸುಳ್ಳು. ಈಗ ಆ ಸ್ವತ್ತುಗಳು ನನ್ನ ಸ್ವಾಧೀನದಲ್ಲಿಯೇ ಇರುತ್ತವೆ. P & SC ಪ್ರಕರಣದಲ್ಲಿ ಕಾಣಿಸಿದ್ದ ಸ್ವತ್ತು ದಾವ ಸ್ವತ್ತಿನ ಉತ್ತರ ದಿಕ್ಕಿಗೆ ಬರುತ್ತದೆ. Willfred pinto ರವರಿಗೆ ಈ ಕೇಸಿನ ಪ್ರತಿವಾದಿಗಳು ಸಹೋದರಿಯರು ಆಗಬೇಕು. P & SC ಪ್ರಕರಣದಲ್ಲಿ ನಾನು ಸುಳ್ಳು ಮಾಹಿತಿ ನೀಡಿ ಆದೇಶವನ್ನು ಪಡೆದುಕೊಂಡಿದ್ದೇನೆ ಎಂದು ಅದೇ ನ್ಯಾಯಾಲಯದಲ್ಲಿ ಈ ಕೇಸಿನ ಪ್ರತಿವಾದಿಯರು revision ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಅವರಿಗೆ ಮಾಹಿತಿ ಇಲ್ಲದೇ ಆ ಅರ್ಜಿಯನ್ನು ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ದಿಃ 11.12.2020 ರಂದು ಆ revision ಅರ್ಜಿ ಪುರಸ್ಕೃತ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. P & SC ಪ್ರಕರಣದಲ್ಲಿ ನಾನು ಸುಳ್ಳು ವಂಶವೃಕ್ಷವನ್ನು ನೀಡಿದ್ದೆ ಎಂದರೆ ಸುಳ್ಳು. P & SC.3/2017 ರಲ್ಲಿ ಏನು ಆದೇಶ ಆಗಿದೆ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ.

13. Willfred pinto ರವರಿಗೆ ಸೇರಿದ P and SC ಯಲ್ಲಿ ಹೇಳಿದ ಸ್ವತ್ತು ದಾವ ಸ್ವತ್ತಿನ ಉತ್ತರ ದಿಕ್ಕಿಗೆ ಬರುತ್ತದೆ ಎಂದು ವಾದ ಪತ್ರದಲ್ಲಿ ಹೇಳಿದ್ದೀರಾ ಎಂದರೆ ತೋರಿಸಿಲ್ಲ. ನಾನು 15 ವರ್ಷಗಳಿಂದ ಕೂವೆ ಗ್ರಾಮದಲ್ಲಿ ವಾಸವಿಲ್ಲ ಎಂದು ಗ್ರಾಮ ಲೆಕ್ಕಾಧಿಕಾರಿಗಳು ದಿಃ 29.08.2022 ರಲ್ಲಿ ವರದಿಯನ್ನು

ನೀಡಿದ್ದಾರೆ ಎಂದರೆ ಸುಳ್ಳು. Willfred pinto ರವರಿಗೆ ಮಂಜೂರಾದ ಆದೇಶ ಸರಿ ಇಲ್ಲ ಎಂದು ನಾನು ಉಪವಿಭಾಗಾಧಿಕಾರಿಗಳಿಗೆ ಮೇಲ್ಮನವಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಮೇಲ್ಮನವಿಯ ಆದೇಶ ನನ್ನ ಪರವಾಗಿ ಆಗಿರುತ್ತದೆ. ಉಪವಿಭಾಗಾಧಿಕಾರಿಗಳ ಆದೇಶದ ವಿರುದ್ದ ಈ ಕೇಸಿನ ಪ್ರತಿವಾದಿಗಳು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ Willfred pinto ರವರಿಗೆ ಮಂಜೂರಾದ ಆದೇಶ ಸರಿಯಾಗಿದೆ ಮತ್ತು ಆ ಜಾಗದ ಸ್ವಾಧೀನದಲ್ಲಿ ಈ ಕೇಸಿನ ಪ್ರತಿವಾದಿಯರು ಇದ್ದಾರೆ ಎಂದು ಆದೇಶ ಆಗಿದೆ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಏನು ಆದೇಶದ ಆಗಿದೆ ಎಂದು ನಾನು ತಿಳಿದುಕೊಂಡಿಲ್ಲ.

14. ದಾವ ಸ್ವತ್ತಿನ ಪಕ್ಕದಲ್ಲಿ ನಾನು ಮನೆ ಹೊಂದಿರುತ್ತೇನೆ. ದಾವ ಸ್ವತ್ತಿನ ದಕ್ಷಿಣಕ್ಕೆ ನಾನು ಮನೆ ಹೊಂದಿರುತ್ತೇನೆ. ದಾವ ಸ್ವತ್ತಿನ ದಕ್ಷಿಣಕ್ಕೆ ನನ್ನ ಮನೆ ಇರುವ ಬಗ್ಗೆ ದಾವೆಯಲ್ಲಿ ಕಾಣಿಸಿದ್ದೇನೆ. ಸರ್ವೆ ನಂಬರ್ 271 ರಲ್ಲಿ ನಾನು 3 ಗುಂಟೆ ಜಮೀನನ್ನು ಹೊಂದಿರುತ್ತೇನೆ. ದಾವ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಆ 3 ಗುಂಟೆ ಜಮೀನು ಬರುತ್ತದೆ. ಆ 3 ಗುಂಟೆ ಜಮೀನಿನಲ್ಲಿ ಮನೆ ಮತ್ತು ತೆಂಗಿನ ಮರ ಇರುತ್ತದೆ. O.S.28/2017 ರ ತೀರ್ಪಿನ ವಿರುದ್ದ ನಾನು ಮೇಲ್ಮನವಿಯನ್ನು ಸಲ್ಲಿಸಿದ್ದೇನೆ. ನಾನು ಸಲ್ಲಿಸಿದ ಮೇಲ್ಮನವಿ ವಜಾ ಆಗಿರುತ್ತದೆ. ಮೇಲ್ಮನವಿ ವಜಾ ಆದ ವರ್ಷ ನನಗೆ ನೆನಪಿಲ್ಲ. O.S.28/2017 ರ ದಾವೆಯಲ್ಲಿ ನಾನು ಈ ಕೇಸಿನ ದಾವ ಸ್ವತ್ತಿನಲ್ಲಿ ಸ್ವಾಧೀನ ಇಲ್ಲ ಎಂದು ತೀರ್ಪು ಆಗಿದೆ ಎಂದರೆ ಸಾಕ್ಷಿ ತೀರ್ಪು ಆಗಿದೆ ಸ್ವಾಧೀನದಲ್ಲಿ ನಾನು ಇದ್ದೇನೆ ಎಂದು ನುಡಿಯುತ್ತಾರೆ. 2023-24 ರಲ್ಲಿ ನಾನು ದಾವ ಸ್ವತ್ತಿನ ಕೃಷಿಗಾಗಿ 12 ರಿಂದ 13 ಲಕ್ಷ ಖರ್ಚು ಮಾಡಿರುತ್ತೇನೆ. 2023-24 ರಲ್ಲಿ ನಿಮಗೆ ಎಷ್ಟು ಆದಾಯ ಬಂದಿತ್ತು ಎಂದರೆ ಸಾಕ್ಷಿ ಆದಾಯವನ್ನು ಪ್ರತಿವಾದಿಯರು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2024-2025 ರಲ್ಲಿ ನೀವು ದಾವ ಸ್ವತ್ತಿನ ಕೃಷಿಗಾಗಿ ಎಷ್ಟು ಖರ್ಚು ಮಾಡಿದ್ದೀರಿ ಎಂದರೆ ಸಾಕ್ಷಿ 2023 ರಲ್ಲಿ ನಾನು ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ.

15. ಪ್ರತಿವಾದಿಯರು ಮಂಗಳೂರು ಮತ್ತು ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಸುಳ್ಳು. 7 ರಿಂದ 10 ನೇ ಪ್ರತಿವಾದಿಯರು ದಾವ ಸ್ವತ್ತಿನ ಬದಿಯಲ್ಲಿ ಅವರ ಮನೆಯಲ್ಲಿ ವಾಸವಿದ್ದಾರೆ. 7 ರಿಂದ 10 ನೇ ಪ್ರತಿವಾದಿಯರ ಮನೆ ನಮ್ಮ ಜಾಗದಿಂದ ಪಶ್ಚಿಮ ದಿಕ್ಕಿಗೆ ಬರುತ್ತದೆ. ದಾವ ಸ್ವತ್ತಿನ ಸ್ವಾಧೀನದಲ್ಲಿ ನಾವು ಸುಮಾರು ವರ್ಷಗಳಿಂದ ಇಲ್ಲ, ಸ್ವಾಧೀನದಲ್ಲಿ ಉಮೇಶ್ ರವರು ಇದ್ದಾರೆ ಎಂದರೆ ಸುಳ್ಳು. ದಾವ ಸ್ವತ್ತನ್ನು ಉಮೇಶ್ ರವರಿಗೆ ಮಾರಾಟ ಮಾಡಿದ್ದರು, Willfred pinto ರವರಿಗೆ ಸೇರಿದ ಜಾಗದ ಚಕ್ಕುಬಂದಿಯನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ.

(ನ್ಯಾಯಾಲಯದ ಸಮಯವಾಗಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 07.11.2025 ರಂದು ಮಧ್ಯಾಹ್ನ 3 ಗಂಟೆಗೆ ಸಾಕ್ಷಿಗೆ ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು

<u>ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಡಿ., ವಕೀಲರಿಂದ ಪ್ರತಿವಾದಿ ಪರವಾಗಿ</u>

16. ನಾನು ಈ ಹಿಂದೆ ನನ್ನ ಹೆಂಡತಿಗೆ ಬರೆದುಕೊಟ್ಟಿದ್ದ ಜಿ.ಪಿ.ಎ ದಲ್ಲಿ ದಾವ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಸರ್ಕಾರಿ ರಸ್ತೆ ಮತ್ತು ನಿರ್ಮಲ ಎಸ್ಟೇಟು ಗೇಟ್ ಇದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಆ ವಿಚಾರ ನಿ.ಪಿ.1 ಮತ್ತು ನಿ.ಪಿ.13 ಕ್ರಯ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿ.ಪಿ.4 ಜಿ.ಪಿ.ಎ ದಲ್ಲಿ ಮನೆ ಮತ್ತು 3 ಗುಂಟೆ ಜಮೀನು ನಮೂದು ಇಲ್ಲ ಎಂದರೆ ಸರಿ. ನಿ.ಪಿ.4 ರಲ್ಲಿ ನನ್ನ ಪತ್ನಿಯ ಸಹಿ ಇಲ್ಲ ಎಂದರೆ ಸರಿ. ನಿ.ಪಿ.1 ದಾವ ಸ್ವತ್ತಿನ ಖರೀದಿ ಪತ್ರ. ನಿ.ಪಿ.13, ನಿ.ಪಿ.1 ಕ್ರಯ ಪತ್ರದ ಮೂಲ ಪ್ರತಿಯಾಗಿರುತ್ತದೆ. ನಿ.ಪಿ.1 ರ ಪುಟ 9 ರಲ್ಲಿ ನಮೂದು ಇರುವ ವಿಚಾರಗಳು ನಿ.ಪಿ.13 ಕ್ರಯ ಪತ್ರದ 9 ನೇ ಪುಟದಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿ.ಪಿ.13 ರ 9 ನೇ ಪುಟದಲ್ಲಿ ಕೈ ಬರವಣಿಗೆಯಲ್ಲಿ ಬರೆದ ವಿವರ ನಿ.ಪಿ.1 ರ ಪುಟ 9 ರಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.13 ರ 9 ನೇ ಪುಟದಲ್ಲಿ ಕೈ ಬರಹದಲ್ಲಿ ಮಾಡಿರುವ ಬರವಣಿಗೆಯ ಕೆಳಗೆ ಇರುವ ಸಹಿ sub-register ರವರದ್ದು ಆಗಿರುತ್ತದೆ. ನಿ.ಪಿ.1 ರ ಪುಟ 9 ರಲ್ಲಿ ನಾನು ಹೇಳಿದ sub-register ರವರ ಸಹಿ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ನಿ.ಪಿ.1 ದೃಢೀಕೃತ ನಕಲು ಆಗಿರುತ್ತದೆ ಎಂದು ನುಡಿಯುತ್ತಾರೆ.

17. ಸರ್ವೆ ನಂಬರ್ 397 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನಿ.ಪಿ.3 ರಲ್ಲಿ ಸರ್ವೆ ನಂಬರ್ 271 ರ ಪೈಕಿ 2 ಎಕರೆ, ಸರ್ವೆ ನಂಬರ್ 397 ರಲ್ಲಿ 5 ಗುಂಟೆ ಜಮೀನುಗಳನ್ನು ನಿ.ಪಿ.1 ಮತ್ತು 13 ರ ಕ್ರಯ ಪತ್ರದಂತೆ ಖಾತೆ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.3 ದಾಖಲೆಯನ್ನು ನಾಡ ಕಚೇರಿಯಿಂದ ಪಡೆದು ಹಾಜರು ಪಡಿಸಿರುತ್ತೇನೆ. ನಿ.ಪಿ.1 ಮತ್ತು ನಿ.ಪಿ.13 ರ ಕ್ರಯ ಪತ್ರದಲ್ಲಿ ಸರ್ವೆ ನಂಬರ್ 397 ನಮೂದು ಇಲ್ಲ ಎಂದರೆ ಸಾಕ್ಷಿ ಅದು ಸರ್ವೆ ನಂಬರ್ 397 ಅಲ್ಲ, ಸರ್ವೆ ನಂಬರ್ 271 ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿರುವ ದಾಖಲೆಗಳನ್ನು

ಈ ಕೇಸಿಗಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳ ಪ್ರಕಾರ ದಾವ ಸ್ವತ್ತಿನ ಮಾಲೀಕ ಅಲ್ಲ ಎಂದರೆ ಸರಿಯಲ್ಲ.

18. ದಿಃ 15.03.2023 ರಂದು ಪ್ರತಿವಾದಿಗಳು ಬಂದು ನನಗೆ ಸೇರಿದ ಜಾಗವನ್ನು ಅತಿಕ್ರಮ ಮಾಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 7 ರಿಂದ 10 ನೇ ಪ್ರತಿವಾದಿಗಳು ಬಂದು ನನ್ನ ಜೊತೆ ಗಲಾಟೆ ಮಾಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ನಾನು ದಾವ ಸ್ವತ್ತಿನ ಮಾಲೀಕ ಅಲ್ಲ ಮತ್ತು ದಾವ ಸ್ವತ್ತು ನನ್ನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ವಿರುದ್ಧ ಸಾಕಷ್ಟು ಕ್ರಿಮಿನಲ್ ಪ್ರಕರಣ ದಾಖಲಾಗಿವೆ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣದಲ್ಲಿ ವಾರೆಂಟ್ ಜಾರಿಯಲ್ಲಿ ಇತ್ತು ಎಂದರೆ ಸರಿ. ಪ್ರತಿವಾದಿಯರಿಗೆ ಮೋಸ ಮಾಡಿ ಅವರಿಗೆ ಸೇರಿದ ಜಮೀನನ್ನು ಪಡೆದುಕೊಳ್ಳಲು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು O.S.39/2023 ರಂತೆ ದಾವೆಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಆ ದಾವೆಯನ್ನು ಬೇರೆ ಜಮೀನುಗಳಿಗೆ ಸಂಬಂಧಿಸಿಂತೆ ದಾವೆ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ ನನಗೆ ಸೇರಿದ ಜಮೀನನ್ನು ಸೇರಿಸಿರುತ್ತಾರೆ. ನನಗೂ ಸಹ ಆ ದಾವೆಯ ಜಮೀನಿನ ಮೇಲೆ ಹಕ್ಕು ಇದೆ ಎಂದು ಹೇಳಿ ನಾನು ಆ ದಾವೆಯಲ್ಲಿ ಅರ್ಜಿ ಸಲ್ಲಿಸಿ ಸೇರ್ಪಡೆಯಾಗಿದ್ದೇನೆ ಎಂದರೆ ಸಾಕ್ಷಿ ಸೇರ್ಪಡೆಯಾಗಿದ್ದೇನೆ, ಆ ಜಮೀನು ನನಗೆ ಸೇರಿದ್ದು ಎಂದು ನುಡಿಯುತ್ತಾರೆ. O.S.39/2023 ರಲ್ಲಿ ಹೇಳಿರುವ ಜಮೀನು P and SC.3/2015 ರಲ್ಲಿ ಕಾಣಿಸಿದ ಜಮೀನು ಎಂದರೆ ಸರಿಯಲ್ಲ. ಈಸ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ